ಓ.ಎಸ್. ನಂ. 171/2015
DW-1

**<u>ಸಾಕ್ಷಿಯನ್ನು ದಿನಾಂಕ: 04-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ ಪಾಟೀಸವಾಲುಃ ವಾದಿ ಪರ ಶ್ರೀ ಟಿ ಕೆ ಎಂ ವಕೀಲರಿಂದ</u>**

1. ಅಕ್ಕಿರಾಂಪುರ ಗ್ರಾಮದ ಖಾತೆ ಸಂ 484 ರ ಸ್ಥಳ ಮಹಜರನ್ನು ಮಾಡಲು ನಾನು ದಿಃ 12.12.2016 ರಂದು ನಾನು ಅರ್ಜಿಯನ್ನು ನೀಡಿರುತ್ತೇನೆ. ದಿಃ 15.12.2016 ರಂದು PDO ರವರು ಸ್ಥಳಕ್ಕೆ ಬಂದು ಮಹಜರನ್ನು ಮಾಡಿರುತ್ತಾರೆ. ಆ ಸಮಯದಲ್ಲಿ PDO ರವರು ಖಾತಾ ಸಂ 484 ರ ಆಜುಬಾಜುದಾರರಿಗೆ ನೋಟೀಸನ್ನು ನೀಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸ್ಥಳ ಮಹಜರ್ ಮಾಡುವಾಗ PDO ರವರು ಸ್ಥಳಕ್ಕೆ ಏನು ದಾಖಲೆಗಳನ್ನು ತಂದಿದ್ದರೆಂದು ನನಗೆ ಗೊತ್ತಿಲ್ಲ. ನಿಡಿ-26 ರಲ್ಲಿ ಕಾಣಿಸಿರುವ ಸಿದ್ದಗಂಗಯ್ಯ, ಬಸವರಾಜು, ಕಾಂತರಾಜು, ಮೂರ್ತಿ, ಮಹೇಶ್, ರಮೇಶ್ ಮತ್ತು ಇತರರ ಮನೆಗಳು ಪ್ರೌಢಶಾಲೆ ಬಳಿ ಇರುತ್ತವೆ ಎಂದರೆ ಸರಿಯಲ್ಲ. ಸದರಿಯವರ ಮನೆಗಳು ಖಾತೆ ಸಂ 484 ರ ಅಕ್ಕಪಕ್ಕ ಇರುವುದಿಲ್ಲ ಎಂದರೆ, ಸ್ವಲ್ಪ ದೂರದಲ್ಲಿರುತ್ತವೆ. ನಿಡಿ-26 ನ್ನು ಸ್ಥಳದಲ್ಲಿ ಬರೆಯುವ ಸಮಯದಲ್ಲಿ ಖಾತಾ ಸಂಃ 484 ರ ಆಜುಬಾಜುದಾರರು ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಖಾತಾ ಸಂ 484 ಕ್ಕೆ ಸಂಬಂಧಿಸಿದಂತೆ ಪಂಚಾಯಿತಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿ. ಸದರಿ ದಾಖಲೆಗಳು ಸರಿ ಇರುತ್ತವೆ ಎಂದರೆ ಸರಿ.

2. ಆಶಾ ಕೋಂ ಶಿವಕುಮಾರ್ ರವರು ಹೊಸ ಮನೆಯನ್ನು ಸುಮಾರು 4-5 ವರ್ಷಗಳ ಹಿಂದೆ ಕಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆಶಾರವರ ಮನೆಯ ಅಕ್ಕಪಕ್ಕದಲ್ಲಿ ಆಂಜನಪ್ಪ, ಲಕ್ಷಮ್ಮ,ಕಾವೇರಮ್ಮ, ರಿಯಾಜ್, ಕುಮಾರ್ ಮತ್ತು ನವೀನ್ ರವರ ಮನೆಗಳು ಇವೆ ಎಂದರೆ, ಕಾವೇರಮ್ಮ ಮತ್ತು ನವೀನ್ ರವರ ಮನೆಗಳು ಇರುತ್ತವೆ. ನಿಡಿ-26 ರಲ್ಲಿ ಕಾಣಿಸಿರುವ ಬಸವರಾಜುರವರು ಈ ದಾವೆಯಲ್ಲಿ ನನ್ನ ಪರವಾಗಿ ಸಾಕ್ಷಿ ನುಡಿದಿರುತ್ತಾರೆಂದರೆ ಸರಿ. ದಿಃ 04.03.2010 ರಂದು ವಾದಿಗೆ ಮನೆ

ಕಟ್ಟಲು ಪಂಚಾಯಿತಿರವರು ನೀಡಿರುವ ಅನುಮತಿಯನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ. EO and PDO ರವರು ಸ್ಥಳ ಪರಿಶೀಲನೆ ಮಾಡಿರುವುದನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ. ನಿಡಿ- 26 ನ್ನು ನಾನು ಈ ಕೇಸಿಗಾಗಿ ಸೃಷ್ಟಿ ಮಾಡಿಕೊಂಡು ಬಂದು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನಿಡಿ- 26 ನ್ನು 2016 ನೇ ಸಾಲಿನಲ್ಲಿ ನಮಗೆ ನೀಡಿದ್ದು ಅದು ನಮ್ಮ ಅಣ್ಣನ ಮನೆಯಲ್ಲಿ ಇತ್ತು. ಈ ಬಗ್ಗೆ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಮತ್ತು ಪ್ರತಿವಾದ ಪತ್ರದಲ್ಲಿ ತಿಳಿಸಿರುವುದಿಲ್ಲ. ನಿಡಿ-26 ರಲ್ಲಿ ಸಹಿ ಮಾಡಿರುವ ವ್ಯಕ್ತಿಗಳು ನಮ್ಮ ಸಂಬಂಧಿಕರು ಆಗಿದ್ದು ನಾನು ಮತ್ತು ಅವರು ಸೇರಿಕೊಂಡು ನಿಡಿ-26 ನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. 2014 ನೇ ಸಾಲಿನಲ್ಲಿ ಅಶ್ವಥಪ್ಪ ಎಂಬವರು PDO ರವರಾಗಿದ್ದರು. ಆನಂದ್ ಎಂಬುವರನ್ನು ಖಾತೆ ಸಂ 484 ಕ್ಕೆ ಸುಳ್ಳು ಚಕ್ಕುಬಂದಿಯನ್ನು ಬರೆದುಕೊಡುವಂತೆ ನಾನು ಕೇಳಿರುತ್ತೇನೆಂದರೆ ಸರಿಯಲ್ಲ. ನಿಡಿ-26 ಕ್ಕೆ ಸಂಬಂಧಿಸಿದಂತೆ ಪಂಚಾಯಿತಿಯಲ್ಲಿ ದಾಖಲೆಗಳು ಇದ್ದು ಅವುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. PDO ಅಶ್ವಥಪ್ಪರವರನ್ನು ನಾನು ಸಾಕ್ಷಿಯಾಗಿ ವಿಚಾರಣೆ ಮಾಡು ತೊಂದರೆ ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**